**ಸೋಶಿಯಲ್ ಕಾಮರ್ಸ್ ಗೆ ಕಾಲಿಟ್ಟ ಫ್ಲಿಪ್ ಕಾರ್ಟ್ ನ 2GUD**

- *ದೇಶಾದ್ಯಂತ ವ್ಯವಹಾರದ ಪರ್ಯಗಳನ್ನು ನೀಡುಲಿರುವ ಸೋಶಿಯಲ್ ಕಾಮರ್ಸ್ ವೇದಿಕೆ*
- *2GUD ಸೋಶಿಯಲ್ ಕಾಮರ್ಸ್ ಬ್ರೌಸ್-ಆಧಾರಿತ, ವಿಡಿಯೋ-ಆಧಾರಿತ ಶಾಪಿಂಗ್ ಅನುಭವವನ್ನು ನೀಡುತ್ತದೆ*

ಬೆಂಗಳೂರು, ಜುಲೈ 08, 2020: ಭಾರತೀಯ ಮೂಲದ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ಇಂದು ತನ್ನ ಸ್ವತಂತ್ರ ಮೌಲ್ಯಾಧಾರಿತ ಪ್ಲಾಟ್ ಫಾರ್ಮ್ ಆಗಿರುವ 2GUD ನಲ್ಲಿ ಸಾಮಾಜಿಕ ವಾಣಿಜ್ಯವನ್ನು ಆರಂಭಿಸಲಾಗುವುದು ಎಂದು ಘೋಷಿಸಿದೆ. ಗ್ರಾಹಕರ ಪ್ರತಿಪಾದನೆಯನ್ನು ಮತ್ತಷ್ಟು ವಿಸ್ತಾರ ಮಾಡುವ ಉದ್ದೇಶವನ್ನು ಹೊಂದಿರುವ ಫ್ಲಿಪ್ ಕಾರ್ಟ್, ಎಲ್ಲಾ ಆಲ್-ಆ್ಯಪ್ ಗ್ರಾಹಕರಿಗೆ ಈ ಸೋಶಿಯಲ್ ಕಾಮರ್ಸ್ ವೈಶಿಷ್ಟ್ಯತೆ ಲಭ್ಯವಿದೆ. 2GUD ನ ಸೋಶಿಯಲ್ ಕಾಮರ್ಸ್ ಪ್ಲಾಟ್ ಫಾರ್ಮ್ ಬಳಕೆದಾರರಿಗೆ ತಡೆರಹಿತವಾದ ವಿಡಿಯೋ ಶಾಪಿಂಗ್ ಅನುಭವವನ್ನು ನೀಡಲಿದೆ. ಇತ್ತೀಚಿನ ಫ್ಯಾಷನ್ ಟ್ರೆಂಡ್ಸ್, ಗ್ಯಾಜೆಟ್ ಗಳ ವಿಮರ್ಶೆಗಳು, ಬ್ಯೂಟಿ ಟಿಪ್ಸ್ ಶೇರಿಂಗ್ ಸೇರಿದಂತೆ ಹಲವು ಬಗೆಯ ಮಾಹಿತಿಗಳನ್ನು ಈ ಸೋಶಿಯಲ್ ಕಾಮರ್ಸ್ ಪ್ಲಾಟ್ ಫಾರ್ಮ್ ನಲ್ಲಿ ನೀಡಲಾಗುತ್ತದೆ.

2GUD ನ ಸೋಶಿಯಲ್ ಕಾಮರ್ಸ್ ಪ್ಲಾಟ್ ಫಾರ್ಮ್ ಹಲವಾರು ವಿಷಯಗಳು ಮತ್ತು ವಿಭಾಗಗಳ ಬಗೆಗಿನ ವಿಡಿಯೋಗಳೊಂದಿಗೆ ಸೂಕ್ತ ಚಿತ್ರಣವನ್ನು ಬಳಕೆದಾರರಿಗೆ ನೀಡುತ್ತದೆ. ಅಂದರೆ, ಇವುಗಳು ಒಂದು ರೀತಿಯಲ್ಲಿ ಪ್ರಭಾವಿಗಳ(ಇನ್ ಫ್ಲುಯೆನ್ಸರ್) ರೀತಿಯಲ್ಲಿ ಕೆಲಸ ಮಾಡುತ್ತವೆ. ವರ್ಚುವಲ್ ಸ್ಟೋರ್ ನಲ್ಲಿ ತಮ್ಮ ಸಂಗ್ರಹದ ಭಾಗವಾಗಿ ಗ್ರಾಹಕರ ನೆಚ್ಚಿನ ಉತ್ಪನ್ನಗಳನ್ನು ಈ ಇನ್ ಫ್ಲುಯೆನ್ಸರ್ ಗಳು ನೀಡುತ್ತವೆ. ಗ್ರಾಹಕರು ವಿಭಾಗಗಳಲ್ಲಿನ ಸ್ಟೈಲಿಂಗ್ ಜರ್ನಿಗೆ ಸಾಕ್ಷಿಯಾಗುವಂತೆ ಮಾಡಲಿವೆ. ಗ್ರಾಹಕರು ವಿಡಿಯೋ ಭಾಗವಾಗಿರುವ ಉತ್ಪನ್ನಗಳನ್ನು ಶಾಪ್ ಮಾಡಲು ಇವ ಅನುವು ಮಾಡಿಕೊಡಲಿವೆ. ಈ ಮೂಲಕ ಗ್ರಾಹಕರು ತಡೆ ರಹಿತವಾದ, ನೈಸರ್ಗಿಕವಾದ ಶಾಪ್ ಮಾಡಬಹುದಾಗಿದೆ.

2GUD

ಈ ಹೊಸ ಉಪಕ್ರಮದ ಬಗ್ಗೆ ಮಾತನಾಡಿದ ಫ್ಲಿಪ್ ಕಾರ್ಟ್ ನಲ್ಲಿ **2GUD** ನ ಮುಖ್ಯಸ್ಥ ಚಾಣಕ್ಯ ಗುಪ್ತಾ ಅವರು, ``ನಾವು ಮುಂದಿನ 200 ದಶಲಕ್ಷ ಗ್ರಾಹಕರು ಈ ಸೋಶಿಯಲ್ ಕಾಮರ್ಸ್ ಆರಾಮದಾಯಕತೆಯನ್ನು ಅನುಭವಿಸುವುದನ್ನು ಕಾಣಬಯಸಿದ್ದೇವೆ ಮತ್ತು ಶಾಪಿಂಗ್ ಅನುಭವವನ್ನು ಪಡೆಯಲು 2GUD ಮೇಲೆ  ವಿಶ್ವಾಸವನ್ನು ನಿರ್ಮಾಣ ಮಾಡಲು ಬಯಸಿದ್ದೇವೆ. ಈ ಗ್ರಾಹಕರು ವಿಶ್ವಾಸಾರ್ಹತೆ ಮತ್ತು ಸ್ಟೈಲ್ ಕೊರತೆಯನ್ನು ಎದುರಿಸುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ವ್ಯಕ್ತಿಯೊಬ್ಬರಿಂದ ಅಥವಾ ಇನ್ ಫ್ಲುಯೆನ್ಸರ್ ನಿಂದ ಬರುವ ಶಿಫಾರಸುಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಈ ಇನ್ ಫ್ಲುಯೆನ್ಸರ್ ಗಳು ಆನ್ ಲೈನ್ ರೀಟೇಲ್ ನ ಲ್ಯಾಂಡ್ ಸ್ಕೇಪ್ ಅನ್ನು ಬದಲಾವಣೆ ಮಾಡುತ್ತಾರೆ ಮತ್ತು ಭಾರತದಲ್ಲಿ ಸೋಶಿಯಲ್ ಕಾಮರ್ಸ್ ಪ್ಲಾಟ್ ಫಾರ್ಮ್ ಗಳಿಗೆ ಒಂದು ಅತ್ಯದ್ಭುತವಾದ ಅವಕಾಶಗಳನ್ನು ಕಲ್ಪಿಸುತ್ತಾರೆ. ದೇಶಾದ್ಯಂತ ಲಕ್ಷಾಂತರ ಫಾಲೋವರ್ ಗಳನ್ನು ಹೊಂದುವ ಮೂಲಕ ಗ್ರಾಹಕರ ಖರೀದಿ ನಿರ್ಧಾರಗಳ ಮೇಲೆ ಸಾಕಷ್ಟು ಸಾಧ್ಯತೆಗಳನ್ನು ಹೊಂದುತ್ತಾರೆ. ಇದರ ಆದ್ಯತೆಯೊಂದಿಗೆ ಗ್ರಾಹಕರ ಗುರಿಗಳು ಅಥವಾ ಅಗತ್ಯತೆಗಳನ್ನು ಸಮರ್ಪಕವಾಗಿ ಅರಿತುಕೊಂಡಿರುವ ವಿಶೇಷವಾದ ಇನ್ ಫ್ಲುಯೆನ್ಸರ್ ಗಳ ತಂಡವನ್ನೇ ಹೊಂದಿದ್ದೇವೆ ಮತ್ತು ಈ ತಂಡವು ಪ್ಲಾಟ್ ಫಾರ್ಮ್ ನಲ್ಲಿ ಗ್ರಾಹಕರು ಖರೀದಿ ಮಾಡುವ ನಿರ್ಧಾರ ಕೈಗೊಳ್ಳಲು ನೆರವಾಗಲಿದೆ'' ಎಂದು ತಿಳಿಸಿದರು.

ಸಾಮಾಜಿಕ ಮಾಧ್ಯಮಗಳ ಆಗಮನದೊಂದಿಗೆ ಕಳೆದ ಕೆಲವು ವರ್ಷಗಳಿಂದ ಗ್ರಾಹಕರು ವಿಷಯಗಳನ್ನು ಗ್ರಹಿಸುವ ವಿಧಾನಗಳು ಗಮನಾರ್ಹವಾದ ರೀತಿಯಲ್ಲಿ ಬದಲಾಗಿವೆ. ಇನ್ ಫ್ಲುಯೆನ್ಸರ್ ಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ವಿಶೇಷವಾಗಿ ಮೆಟ್ರೋ ನಗರಗಳ ಹೊರತಾದ ಪ್ರದೇಶಗಳಲ್ಲಿ ಹೊಸ ತಲೆಮಾರಿನ ವಿಷಯ ರಚನೆಕಾರರಿಗೆ ಒಂದು ಮಾರ್ಗವನ್ನು ನೀಡಿದಂತಾಗಿದೆ. ಅವರು ಆಳವಾದ ವೈಯಕ್ತಿಕ ಸಂಪರ್ಕಗಳನ್ನು ಹೆಚ್ಚಿಸಲು ಸಮರ್ಥರಾಗಿದ್ದಾರೆ ಮತ್ತು ಮೆಟ್ರೋ ನಗರಗಳನ್ನು ಮೀರಿ ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರಿಗೆ ಸಂಬಂಧಿಸಿರುತ್ತಾರೆ. ಉದ್ಯಮದ ವರದಿಗಳ ಪ್ರಕಾರ ವಿಸ್ತರಣೆಯ ಭಾಗವಾಗಿ ಸೋಶಿಯಲ್ ಕಾಮರ್ಸ್ ಈಗಾಗಲೇ ಇಂದು ಆನ್ ಲೈನ್ ರೀಟೇಲ್ ಮಾರುಕಟ್ಟೆಯಲ್ಲಿ ಶೇ.15-20 ರಷ್ಟು ಹೆಚ್ಚಳ ಮಾಡಿದೆ. ಮುಂದಿನ ದಶಕದಲ್ಲಿ ಇದರ ವ್ಯವಹಾರ 70 ಬಿಲಿಯನ್ ಡಾಲರ್ ಗೆ ತಲುಪುವ ನಿರೀಕ್ಷೆ ಇದೆ. ಕಡಿಮೆ ದರದಲ್ಲಿ ಲಭ್ಯವಿರುವ ಡೇಟಾದಿಂದಾಗಿ ಮತ್ತು ಭಾರತದಲ್ಲಿ ಮೊದಲ ಬಾರಿಗೆ ಇಂಟರ್ನೆಟ್ ಬಳಕೆದಾರರ ಮಾರುಕಟ್ಟೆ ವಿಸ್ತಾರಗೊಂಡಿದೆ. ವಿಶೇಷವಾಗಿ 2 ಮತ್ತು 3 ನೇ ಹಂತದ ನಗರಗಳಲ್ಲಿ ಈ ಹೆಚ್ಚಳ ಕಂಡುಬರುತ್ತಿದ್ದು, ಸೋಶಿಯಲ್ ಕಾಮರ್ಸ್ ಉದ್ಯಮದ ಬೆಳವಣಿಗೆಗೆ ಒಂದು ಉತ್ತಮ ಅವಕಾಶವನ್ನು ಕಲ್ಪಿಸಿದಂತಾಗಿದೆ.

2GUD


Search for products
Categories
Women's Fashion
Men's Fashion
Mobiles & Electronics
Trending Videos
How to: style a overcoat
2 Ways to wear a kurti as a dress
Play
Explore
Me


Search for products
Categories
Women's Fashion
Men's Fashion
Mobiles & Electronics
Trending Videos
Styling Your White Sneaker 3 Ways
Look cool with basics you already ...
Play
Explore
Me


SjDfreak
Sadhvi Sadh
8 followers
Trending Collections
COLLECTION
Trend alert: Pretty in Pink
COLLECTION
Sleveless Styles
Trending Products
Condition
Unboxed - Like New
JBL T160BT Bluetooth Headset with Mic
₹1059 ₹2499
Metro Fashion Women Multicolor Kurta
₹799 ₹2399
Play
Explore
Me

2GUD

ತನ್ನ ಆ್ಯಪ್ ನಲ್ಲಿ ಸೋಶಿಯಲ್ ಕಾಮರ್ಸ್ ಅನ್ನು ಆರಂಭಿಸುವುದರೊಂದಿಗೆ 2GUD ತನ್ನ ಎಂ-ಸೈಟ್ ಮತ್ತು ವೆಬ್ ಸೈಟ್ ನಲ್ಲಿ ಮತ್ತಷ್ಟು ವಿಸ್ತರಣೆ ಮಾಡಲಿದೆ. 2GUD ಪ್ರಸ್ತುತ 600 ಕ್ಕೂ ಅಧಿಕ ಆಫರ್ ಗಳನ್ನು ನೀಡುತ್ತಿದ್ದು, ಹಾಲಿ ಇರುವ ಉತ್ಪನ್ನಗಳ ವಿಭಾಗಗಳನ್ನು ಮತ್ತಷ್ಟು ಸದೃಢಗೊಳಿಸುತ್ತಿದೆ. ಈ ಪ್ಲಾಟ್ ಫಾರ್ಮ್ ಭಾರತಾದ್ಯಂತ 15,000 ಕ್ಕೂ ಅಧಿಕ ಸ್ಥಳಗಳಲ್ಲಿ ಲಕ್ಷಾಂತರ ಗ್ರಾಹಕರನ್ನು ಹೊಂದಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution. With a registered customer base of over 200 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has driven us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, and PhonePe, India's fastest growing digital payments platform, the Flipkart Group is steering the transformation of commerce in India through technology.

**For more information, please contact media@flipkart.com.**